ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ.

**6ನೇ ಅಡ್ಡರಸ್ತೆ. ಮಲ್ಲೇಶ್ವರಂ. ಬೆಂಗಳೂರು – 560003**

****************************************************************************************

**ಸಂಖ್ಯೆ : ಗ.ಶಾ/ಎಸ್.ಎಸ್.ಎಲ್.ಸಿ/ಆ.ಅಂ.ಅಪ್/02/2019–20** **ದಿನಾಂಕ: 07.03.2020**

**– ಸುತ್ತೋಲೆ –**

**ವಿಷಯ :** ಏಪ್ರಿಲ್–2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದು ಮಾಡುವ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ : 1) ಈ ಕಚೇರಿ ಪತ್ರ ಸಂಖ್ಯೆ ಗ.ಶಾ/ಎಸ್.ಎಸ್.ಎಲ್.ಸಿ/ಆ.ಅಂ.ಅಪ್/01/2019–20 ದಿನಾಂಕ: 20.02.2020

2) ಮುಖ್ಯ ಶಿಕ್ಷಕರುಗಳ ಮನವಿಯ ಮೇರೆಗೆ.

*****

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಯ ಏಪ್ರಿಲ್–2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ತೆಗೆದುಕೊಳ್ಳುವ ಶಾಲಾ ವಿದ್ಯಾರ್ಥಿಗಳ(CCERF) ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದು ಮಾಡಲು ಉಲ್ಲೇಖ 01 ರಂತೆ ದಿನಾಂಕ 26.02.2020 ರಿಂದ 06.03.2020 ರವರೆಗೆ ಅವಕಾಶ ಕಲ್ಪಿಸಲಾಗಿದ್ದು, ನಮೂದು ಮಾಡುವ ಮತ್ತು ಫ್ರೀಜ್ ಮಾಡುವ ವಿಧಾನದ ಬಗ್ಗೆ ಸವಿಸ್ತಾರವಾಗಿ ತಿಳಿಸಲಾಗಿತ್ತು. ಆದಾಗ್ಯೂ 13 ಶಾಲೆಗಳು ಇನ್ನೂ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸುವ ಚಟುವಟಿಕೆಯನ್ನು ಪ್ರಾರಂಭಿಸಿರುವುದಿಲ್ಲ ಮತ್ತು 2451 ಶಾಲೆಗಳು ಆಂತರಿಕ ಅಂಕಗಳನ್ನು ಪರಿಶೀಲಿಸಿ ಫ್ರೀಜ್ ಮಾಡದ ಕಾರಣ ದಿನಾಂಕವನ್ನು ವಿಸ್ತರಿಸುವಂತೆ ಕೆಲವು ಶಾಲೆಗಳ ಮುಖ್ಯ ಶಿಕ್ಷಕರು ಮನವಿ ಮಾಡಿರುತ್ತಾರೆ. ಅದರಂತೆ ಆಂತರಿಕ ಅಂಕಗಳನ್ನು ನಮೂದಿಸಿ ಫ್ರೀಜ್ ಮಾಡಲು ದಿನಾಂಕ 13.03.2020ರವರೆಗೆ ಅವಕಾಶ ಕಲ್ಪಿಸಲಾಗಿದೆ. ಇದು ಅಂತಿಮ ವಿಸ್ತರಣೆ ದಿನಾಂಕವಾಗಿರುತ್ತದೆ.

(ಸುಮಂಗಲ. ವಿ)
ನಿರ್ದೇಶಕರು (ಪರೀಕ್ಷೆಗಳು)

**ಅಗತ್ಯ ಕ್ರಮಕ್ಕಾಗಿ :**

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
3) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗು ಮಾನ್ಯತೆ ಪಡೆದಿರುವ ಖಾಸಗಿ ಅನುದಾನರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ